# 'ಒಗ್ಗರಣೆ'ಯ ಪರಿಮಳಕ್ಕೆ ಮನಸೋತು..

(37ನೇ ಪುಟದಿಂದ)

ಊಟ ಅನ್ನುವುದೊಂದು ದೈವಿಕ ಕ್ರಿಯೆ. ಉಪ್ಪು–ಹುಳಿ–ಖಾರದ ನವರಸಗಳನ್ನೂ ಮನಸೋ ಇಚ್ಛೆ ಸವಿದು ತಟ್ಟೆ ಪೂರ್ತಿ ಖಾಲಿಯಾದ ಬಳಿಕ ಬೆರಳುಗಳನ್ನು ಜುಮ್ ಎನ್ನುವಂತೆ ಚೀಪಿ ಊಟ ಮುಗಿಸುವ ಮಂದಿಗೇ ಗೊತ್ತು ಆ ಸಂಭ್ರಮ.

ಚಿತ್ರದ ಪೂರ್ವಾರ್ಧ ಪೂರ್ತಿ ಅದೇ ಸಂಭ್ರಮ. ಸಿನಿಮಾ–ದಲ್ಲಿ ಕಂಠದಾನ ಕಲಾವಿದೆಯಾದ ಚಿತ್ರದ ನಾಯಕಿಗೂ 35 ದಾಟಿಯೂ ಮದುವೆಯಾಗಿಲ್ಲ. ಯಾವ ಗಂಡೂ ಸೆಟ್ ಆಗುತ್ತಿಲ್ಲ. ಆಕೆ ವಾಸಿಸುತ್ತಿರುವ ಅಕ್ಕನ ಮನೆಯಲ್ಲಿ ಪ್ರತಿದಿನ ಇದೇ ಚರ್ಚೆ. ಎಷ್ಟೆಂದರೆ ಮದುವೆ ಬಗ್ಗೆಯೇ ರೋಸಿ ಹೋಗುವಷ್ಟು! ಅವತ್ತೊಂದು ದಿನ ಡಬ್ಬಿಂಗ್ ಸ್ಟುಡಿಯೋದಲ್ಲಿ ತಲೆನೋವು ಬಂದು ಸುಸ್ತಾಗಿ ಹೋಟೆಲೊಂದಕ್ಕೆ ಫೋನ್ ಮಾಡಿ 'ಒಂದು ಪ್ಲೇಟ್ ಕುಟ್ಟಿ ದೋಸೆ ಕಳಿಸಿ' ಎನ್ನುತ್ತಾಳೆ. ಅದು ರಾಂಗ್ ನಂಬರ್. ಕರೆ ಸ್ವೀಕರಿಸಿದ್ದು ಕಥಾ ನಾಯಕ! ಅಲ್ಲಿಂದ ಶುರುವಾಗುತ್ತದೆ ಇನ್ನೊಂದು ಶ್ರವಣ ಸಂಭ್ರಮ. ಪ್ರತಿದಿನವೂ ಫೋನ್. ಗಂಟೆಗಟ್ಟಳೆ ಮಾತು. ಅದೂ ಅಡುಗೆಯ ಬಗ್ಗೆ. ಮಾತು ಮಾತು ಮಥಿಸಿ ಅಮ್ಮ ಮಾಡುತ್ತಿದ್ದ ಅಡುಗೆಯ ನೆನಪಾಗಿ ಮೊಬೈಲ್‌ನ ಆ ತುದಿಯಲ್ಲಿ ನಾಯಕಿ ಕಣ್ಣೀರು ಕರಗಿ, ಈ ಕಡೆ ನಾಯಕ ವಿಹ್ವಲನಾಗಿ...!

ಮಧ್ಯಂತರದ ಬಳಿಕ ಕಥೆಗೊಂದು ಟ್ವಿಸ್ಟ್. 45 ದಾಟಿದ ಗಂಡು 24ರ ಹುಡುಗಿಯನ್ನು ಪ್ರೀತಿಸಬಹುದೆ.. ಮದುವೆ–ಯಾಗಬಹುದೆ.. ಎನ್ನುವ ತೊಳಲಾಟ. ಫೋನ್ ಸಂಭಾಷಣೆಗೆ ಸಿಡಿಲು ಬಡಿದು, ಪ್ರೀತಿಯ ನೋವಿನ ಆಕ್ರಂದನ. ಇರುವ ನಾಲ್ಕು ಪಾತ್ರಗಳ ನಡುವೆ ಅದೊಂದು ಪ್ರೇಮ ಕದನ ಕುತೂಹಲ. ಪೂರ್ವಾರ್ಧದಲ್ಲಿ ಎದೆಯ ತಂತಿಗಳನ್ನು ಮಧುರವಾಗಿ ಮೀಟುವಂತಹ ಎರಡು ಹಾಡುಗಳನ್ನು ಸಂಯೋಜಿಸಿದ್ದಾರೆ ಇಳೆಯರಾಜ. 'ಗಾಳಿಯ ಮಾತಲಿ, ಏನಿದು ಆರಂಭ..' ಎನ್ನುವ ಜಯಂತ ಕಾಯ್ಕಿಣಿ ರಚನೆಯಂತೂ ಥಿಯೇಟರ್ ಬಿಟ್ಟ ಬಳಿಕವೂ ಗಾಳಿಯಲ್ಲಿ ಪ್ರೇಕ್ಷಕನನ್ನು ಹಿಂಬಾಲಿಸುತ್ತದೆ. ಮಧ್ಯಂತರದ ಬಳಿಕ ಮಾತ್ರ ಇಳಯರಾಜ ಅವರು ನಾಯಕ– ನಾಯಕಿಯ ಗೋಳನ್ನು ಎರಡು ಹಾಡುಗಳ ಮೂಲಕ ಇನ್ನಷ್ಟು ವಿಸ್ತರಿಸುತ್ತಾರೆ– ಎಷ್ಟೆಂದರೆ, 'ಈ ಹಾಡು ಇಲ್ಲಿ ಬೇಕಿತ್ತಾ?' ಎನ್ನುವಷ್ಟು!

ಪ್ರಕಾಶ್ ರೈ ಎಷ್ಟು ಅದ್ಭುತ ನಟನೋ ಅಷ್ಟೇ ಪ್ರಬುದ್ಧ ಮತ್ತು ಸೃಜನಶೀಲ ಮನಸ್ಸಿನ ನಿರ್ದೇಶಕ ಎನ್ನುವುದನ್ನು ಅವರ ಈ ಎರಡನೇ ಚಿತ್ರವೂ ಸಾಬೀತು ಮಾಡಿದೆ. ಆದರೆ ಮೊದಲ ಸಿನಿಮಾ 'ನಾನೂ ನನ್ನ ಕನಸು' ಚಿತ್ರಕ್ಕಿದ್ದ ಅದ್ಭುತ ಫೆವಿಕ್ವಿಕ್ ಗುಣ ಇಲ್ಲಿ ಕಾಣೆಯಾಗಿದೆ. ನಾಲ್ಕೇ ಮುಖ್ಯ ಪಾತ್ರಗಳ ಸುತ್ತ ಸುತ್ತಬೇಕಾದ ಕಥೆ ಅನಗತ್ಯವಾಗಿ ಆದಿವಾಸಿಯೊಬ್ಬನ ಸುತ್ತ ತಿರುಗಿ, ಹಳಿ ತಪ್ಪಿ ಕೊನೆಗೂ ಮರಳಿ ಬರುತ್ತದೆ. ಮಧ್ಯಂತರದ ನಂತರ ಚಿತ್ರಕಥೆಯ ಗೊಂದಲ ಪ್ರೇಕ್ಷಕನಿಗೆ ಎದ್ದು ಕಾಣುತ್ತದೆ. 'ನಾನೂ ನನ್ನ ಕನಸು' ಚಿತ್ರದಲ್ಲಿ ಅಪ್ಪ–ಮಗಳು–ಪತ್ನಿಯ ಸುತ್ತ ಕಥೆ ಕೇಂದ್ರೀಕೃತವಾಗಿ ಅನುಭವ ಅದ್ಭುತವಾಗಿದ್ದರೆ, ಇಲ್ಲಿ ಮಧ್ಯಂತರದ ನಂತರದ ಗೊಂದಲದ ಜಾಡು, ಒಗ್ಗರಣೆ ಸ್ವಲ್ಪ ಸೀದುಹೋದಂತೆ ಅನ್ನಿಸುತ್ತದೆ.

'ಸಿನಿಮಾ ಎಂದರೆ ಸಂಭ್ರಮ ಎನ್ನುತ್ತೀರಿ. ಆದರೆ ದುಃಖವನ್ನೂ ಸಂಭ್ರಮಿಸುವುದು ಹೇಗೆ?' ಎಂದು ಕೇಳಿದೆ. ಪ್ರಕಾಶ್ ರೈ ಸ್ವಲ್ಪ ಆಲೋಚಿಸಿ ಹೇಳಿದ್ದು– 'ಹೌದು, ದುಃಖ, ಸಂತೋಷ, ಅಳು, ನಗು, ಬೇಸರ ಎಲ್ಲವನ್ನೂ ಸಂಭ್ರಮಿಸಬೇಕು. ಸಿನಿಮಾ ಎಂದರೆ ನನ್ನ ಮಟ್ಟಿಗೆ ಶುದ್ಧ ಸಂಭ್ರಮವೇ..'

ಆದರೆ ಈ ಸಿನಿಮಾ ಕನ್ನಡದ ಪ್ರೇಕ್ಷಕನ ಮನ ಮುಟ್ಟಬಹುದೆ ಎಂಬ ಬಗ್ಗೆ ರೈ ಅವರಿಗೂ ಅನುಮಾನ ಇದ್ದಂತಿತ್ತು. 'ಕನ್ನಡಿಗರಲ್ಲಿ ಈ ಸಿನಿಮಾ ಪೂರ್ತಿ ನೋಡುವಷ್ಟು ಸಹನೆ ಇರಬಹುದೆ?' ಎಂದು ಮರುಪ್ರಶ್ನಿಸಿದರು. ಹೌದು, "ಒಗ್ಗರಣೆ" ಪೂರ್ತಿ ನೋಡಲು ಸ್ವಲ್ಪ ಸಹನೆ ಬೇಕೇ ಬೇಕು. ಕಥೆಯ ಅಂತ್ಯ ಏನಾಗುತ್ತದೆ ಎನ್ನುವುದು ಮಧ್ಯಂತರದ ವೇಳೆಗೆ ಪ್ರೇಕ್ಷಕನಿಗೆ ಸ್ಪಷ್ಟವಾಗಿ ಹೊಳೆಯುವುದರಿಂದ ಈ ಬಿಕ್ಕಟ್ಟು ಉದ್ಭವಿಸಿದಂತಿದೆ. ಪೂರ್ವಾರ್ಧದಲ್ಲಿ ಅಡುಗೆ ಮನೆಯ ಸುತ್ತಲೇ ಪರಿಭ್ರಮಿಸುವ ಕ್ಯಾಮೆರಾ, ಮಧ್ಯಂತರದ ಬಳಿಕ ಒಗ್ಗರಣೆಯ ಪರಿಮಳವನ್ನೇ ಮರೆತು ತಿರುಗುತ್ತದೆ. ಕ್ಲೈಮ್ಯಾಕ್ಸ್‌ನಲ್ಲಿ ಮತ್ತೆ ಅದೇ ಒಗ್ಗರಣೆಯ ಪರಿಮಳ ಮೂಗರಳಿಸಬಹುದೆ.. ಎಂಬ ಪ್ರೇಕ್ಷಕನ ನಿರೀಕ್ಷೆ



ಬೊಂಬೆಯಾಟದ ಮಧ್ಯೆ ಸೊರಗುತ್ತದೆ.

ಅದೇನೇ ಇದ್ದರೂ 'ಒಗ್ಗರಣೆ' ನಾನು ಇತ್ತೀಚೆಗೆ ನೋಡಿದ ಅತ್ಯಂತ ಚೇತೋಹಾರಿ ಸಿನಿಮಾ ಎನ್ನುವುದು ಖಂಡಿತಾ. ನಾಯಕ– ನಾಯಕಿಯ ಮೊಬೈಲ್ ಸಂಭಾಷಣೆಯ ನಡುವೆಯೇ ಎರಡನೆ ವಿಶ್ವಯುದ್ಧದ ಸೈನಿಕನೊಬ್ಬನ ಪತ್ನಿ ಮಾಡುವ ಅದ್ಭುತ ಕೇಕ್‌ನ ಕಥೆಯನ್ನು ತಂದಿರುವುದು, ಹಾಡುಗಳ ಮಧ್ಯೆಯೇ ಕೇಕ್ ತಯಾರಿಯನ್ನು ದೃಶ್ಯರೂಪಕವಾಗಿ ಕಟ್ಟಿಕೊಟ್ಟದ್ದು ನಿರ್ದೇಶಕನೊಬ್ಬನ ಅದ್ಭುತ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಒಂದೆರಡು ದೃಶ್ಯಗಳಲ್ಲಿ ಪ್ರೇಕ್ಷಕನ ಹೃದಯದೊಳಕ್ಕೇ ನೇರವಾಗಿ ಇಳಿದು ಕೈಯಾಡಿಸುತ್ತಾರೆ ನಿರ್ದೇಶಕ ಪ್ರಕಾಶ್ ರೈ, ಎಷ್ಟೆಂದರೆ ಆ ಕೇಕ್‌ನ ಮೇಲೆಯೇ ಪ್ರೇಕ್ಷಕರ ಕಣ್ಣೀರು ತೊಟ್ಟಿಕ್ಕುವಷ್ಟು! ಚಿತ್ರದ ಇಬ್ಬರು ನಾಯಕಿಯರೂ (ಸ್ನೇಹಾ ಪ್ರಸನ್ನ ಮತ್ತು ಸಂಯುಕ್ತ ಬೆಳವಾಡಿ) ಒಬ್ಬರ ಜತೆಗೆ ಇನ್ನೊಬ್ಬರು ಜಿದ್ದಿಗೆ ಬಿದ್ದಂತೆ ನಟಿಸಿದ್ದಾರೆ. ಅದರಲ್ಲೂ ಸಂಯುಕ್ತ ತನ್ನ ಅಗಲಕಣ್ಣುಗಳಿಂದ, ಚಿಮ್ಮುವ ಯೌವನದಿಂದ ಪಾತ್ರವನ್ನು ನಟನೆಯ ಹೊಸ ಎತ್ತರಕ್ಕೆ ಒಯ್ದಿದ್ದಾಳೆ. ಮಂಡ್ಯ ರಮೇಶ್, ಅಚ್ಯುತ, ಊರ್ವಶಿ ಅವರ ನಟನೆ ಚಿತ್ರಕಥೆಗೆ ಪೂರಕವಾಗಿದೆ. ಚಿತ್ರಕಥೆ ಚೇತೋಹಾರಿ ಎನ್ನಿಸಲು ಕ್ಯಾಮೆರಾ ಕೂಡಾ ದೊಡ್ಡ ಕಾರಣ.

ಬಿಡುವಿಲ್ಲದ ನಟನೆಯ ನಡುವೆ ಪ್ರಕಾಶ್ ರೈ ಇನ್ನಷ್ಟು ಕನ್ನಡ ಚಿತ್ರಗಳನ್ನು ನಿರ್ದೇಶಿಸಲಿ. ಹೊಡಿ– ಬಡಿ ಚಿತ್ರಗಳ ಮಧ್ಯೆ ಸೊರಗಿರುವ ಕನ್ನಡದ ಪ್ರೇಕ್ಷಕನ ಸಿನಿಮಾ ಮೋಹವನ್ನು ಇನ್ನಷ್ಟು ಗಾಢವಾಗಿಸಲಿ.